ಸಿಗುತ್ತಿದೆ, ದಯಮಾಡಿ ಇಂಥ ನಿರ್ಣಯಗಳನ್ನು ತಾವು ಗಟ್ಟಿಯಾಗಿ ಮಾಡಬೇಕು.

ಅಧ್ಯಕ್ಷರು: ಈಗ Ethics Committee ನಮ್ಮಲ್ಲಿಲ್ಲ. Ethics Committee ಯನ್ನು ಮಾಡುತ್ತಿದ್ದೇವೆ. ಆ Ethics Committee ರಚನೆ ಆಗಿ ಅವರು ನೀಡುವ ರಿಪೋರ್ಟ್ ಆಧಾರದ ಮೇಲೆ ನಾನು ಇದನ್ನು ಪರಿಗಣಿಸುತ್ತೇನೆ. ಈಗ ದಿನೇಶ್ ಮಾತನಾಡಿ.

ಶ್ರೀ ದಿನೇಶ್ ಗುಂಡೂರಾವ್:–ಮಾನ್ಯ ಅಧ್ಯಕ್ಷರೇ, ಈಗ ಕೆ.ಪಿ.ಎಸ್.ಸಿ. ಮೂಲಕ ಪ್ರತಿ ವರ್ಷವೂ ಕೂಡ ಅಧಿಸೂಚನೆ ಹೊರಡಿಸಿ ನೇಮಕಾತಿ ಮಾಡುವ ಕ್ರಮ ಇದೆ. ಕರ್ನಾಟಕದಲ್ಲಿ ಬಹುಶಃ ಪ್ರತಿ ವರ್ಷವೂ ಆ recruitment ಆಗುತ್ತಿಲ್ಲ. ಇವತ್ತು ಯು.ಪಿ.ಎಸ್.ಸಿ. ಇರಬಹುದು ಅಥವಾ ಬೇರೆ ಬೇರೆ ರಾಜ್ಯಗಳಿಗಿರಬಹುದು, ಅಲ್ಲಿ ಪ್ರತಿ ವರ್ಷವೂ ಕೂಡ ಯಾವುದೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂಥ ಪ್ರಕ್ರಿಯೆ ನಡೆಯುತ್ತದೆ. ಈಗಲೂ ಸಹ ನಮ್ಮಲ್ಲಿ ಸಾಕಷ್ಟು ಕೆ.ಎ.ಎಸ್. ಹುದ್ದೆಗಳು class-1 ಹುದ್ದೆಗಳು, ಖಾಲಿ ಇವೆ, ಇವತ್ತು 150 EO ಹುದ್ದೆಗಳು ಖಾಲಿ ಇವೆ. KAS ಹುದ್ದೆಗಳು ಕೂಡ ಖಾಲಿಯಿವೆ. ಎಲ್ಲವನ್ನು ಭರ್ತಿ ಮಾಡತಕ್ಕಂಥ ಪ್ರಕ್ರಿಯೆಯನ್ನು ಈ ಸರ್ಕಾರ ಈ ವರ್ಷ ಮಾಡಿಲ್ಲ, ಅದುದರಿಂದ ಸರ್ಕಾರ ಈ ವರ್ಷ ಈ ಹುದ್ದೆಗಳನ್ನು ಭರ್ತಿ ಮಾಡ ತಕ್ಕಂಥ ಪ್ರಕ್ರಿಯೆಯನ್ನು ಮಾಡುವಿರಾ ಅಥವಾ ಯಾವಾಗ ಅಧಿಸೂಚನೆಯನ್ನು ಹೊರಡಿಸುವಿರಿ ಎಂದು ಬಹಳ ಸ್ಪಷ್ಟವಾದ ಉತ್ತರವನ್ನು ಸರ್ಕಾರ ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಅಧ್ಯಕ್ಷರು: ಕೆ.ಪಿ.ಎಸ್.ಸಿ. ನೇಮಕಾತಿ ಬಗ್ಗೆ ಕೇಳುತ್ತಿದ್ದಾರೆ, ಉಪಮುಖ್ಯಮಂತ್ರಿಗಳು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಉಪ ಮುಖ್ಯಮಂತ್ರಿ):– ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳೊಡನೆ ಮಾತನಾಡಿ ಅದಕ್ಕೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಹಾಗೂ ಅವರಿಗೆ ಉತ್ತರ ಕೊಡಿಸುವಂಥ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಹೆಚ್.ಸಿ.ಮಹದೇವಪ್ಪ:– ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು:–ನಿಮ್ಮದೇನು ಕಳುಹಿಸಿಲ್ಲವಲ್ಲ.